**ಮುಂದುವರೆದ ಪಾಟೀ ಸವಾಲು ಃ 5 ಮತ್ತು 6ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ ಕೆ ವಿ ರವರಿಂದ ಃ-**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಿ .ಡಬ್ಲ್ಯೂ. 4. ದಿಃ 27-10-2018. ಓ ಎಸ್ ನಂ ಃ 51/2007**

1 ರಿಂದ 4ನೇ ಪ್ರತಿವಾದಿಗಳು 5ನೇ ಪ್ರತಿವಾದಿಗೆ 1983 ರಲ್ಲಿ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯಪತ್ರವನ್ನು ಪ್ರಸ್ತುತ ದಾವೆಯನ್ನು ಹೊರತುಪಡಿಸಿ ಬೇರೆ ದಾವೆಗಳಲ್ಲಿ ಪ್ರಶ್ನಿಸಿರುತ್ತೇವೆ. ನನಗೆ ಓದಲು ಬರುವುದಿಲ್ಲ. ಸದರಿ ಕ್ರಯಪತ್ರವನ್ನು ಪ್ರಸ್ತುತ ದಾವೆಯಲ್ಲಿ ಹೊರತುಪಡಿಸಿ ಬೇರೆ ದಾವೆಗಳಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಿಪಿ 5 ನ್ನು ರದ್ದುಪಡಿಸಿರುವ ವಿಚಾರವಾಗಿ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ಕಂದಾಯ ದಾಖಲೆಗಳು 1 ರಿಂದ 4ನೇ ಪ್ರತಿವಾದಿಗಳ ತಂದೆ ಮತ್ತು 1 ರಿಂದ 6ನೇ ಪ್ರತಿವಾದಿಗಳಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಸದರಿ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಗಳ ತಂದೆಯ ಹೆಸರು ಇದೆ ಎಂದರೆ ಸರಿ. ಇಂದಿಗೂ ಸಹಾ ದಾವಾ ಆಸ್ತಿಗಳಲ್ಲಿ 6ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ನಮಗೂ ಮತ್ತು 1 ರಿಂದ 4ನೇ ಪ್ರತಿವಾದಿಗಳಿಗೆ ಸಂಬಂಧ ಇದೆ ಎಂದರೆ ಸರಿಯಲ್ಲ.

ನಿಪಿ 19ನ್ನು ತಪ್ಪು ಮಾಹಿತಿ ನೀಡಿ ಪಡೆದುಕೊಂಡಿರುತ್ತೇವೆಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಅಧಿಕಾರ ಮತ್ತು ಸ್ವಾಧೀನ ಇದ್ದುದರಿಂದ ಅವರು ಬರೆದುಕೊಟ್ಟಿರುವಂತ ನಿಪಿ 11 ಊರ್ಜಿತವಾದ್ದು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 5ನೇ ಪ್ರತಿವಾದಿ ಖರೀದಿ ಮಾಡಿದ ನಂತರ 6ನೇ ಪ್ರತಿವಾದಿಗೆ ನಿಪಿ 36 ರಲ್ಲಿ ಮಾರಾಟ ಮಾಡಿರುತ್ತಾರೆಂದರೆ

ಸರಿಯಲ್ಲ. ನಿಪಿ 37 ರಿಂದ 44 ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಪ್ರಾ ಸಾ 1 ರವರು ಬಿಟ್ಟಿರುವ ಲೋಪಗಳನ್ನು ಸರಿ ಪಡಿಸಿರುವ ಉದ್ದೇಶದಿಂದ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ- ಇಲ್ಲ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇಳಿ ಕೇಳಿ ಸರಿ ಇದೆ.**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ,, ಗುಬ್ಬಿ**